INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,18-30
Peer Reviewed Journal, Referred Journal

# ಕಾರ್ಮಿಕರ ಸಂರಕ್ಷಕ ಧ್ವನಿ: ಡಾ.ಬಿ.ಆರ್.ಅಂಬೇಡ್ಕರ್

ಡಾ.ಎಂ.ರಾಚಪ್ಪಾಜಿ.[1]

*ಭಾರತದಲ್ಲಿ ನಿರಂತರ ಬಡತನದ ವೃತ್ತದಲ್ಲಿ ಸಿಲುಕಿರುವ ಜನರನ್ನು ಸಂರಕ್ಷಿಸಲು ಕೈಗಾರಿಕೀಕರಣವು ನಿಶ್ಚಿತವಾದ ಸಾಧನವೇ ಆಗಿದೆ. ಗಂಭೀರವಾದ ಕೈಗಾರೀಕರಣ ಬಿಟ್ಟು ಭಾರತದಲ್ಲಿ ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಲು ಯಾವುದರಿಂದಲೂ ಸಾಧ್ಯವಿಲ್ಲ.*

*–ಡಾ.ಬಿ.ಆರ್.ಅಂಬೇಡ್ಕರ್*

**ಪೀಠಿಕೆ:–**

ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರು ಮೂಲತಃ ಕಾರ್ಮಿಕ ಹಿನ್ನೆಲೆಯುಳ್ಳ ಕುಟುಂಬದಲ್ಲಿ ಜನಿಸಿದವರು. ಆದ್ದರಿಂದಲೇ ಆ ಕಾರ್ಮಿಕರ ಬದುಕು–ಬವಣೆ, ಅವರು ಎದುರುಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಸ್ವತಃ ಕಂಡುಂಡವರಾಗಿದ್ದರು. ಅಂಬೇಡ್ಕರ್ ಅವರಿಗೆ ಕಾರ್ಮಿಕರ ಬದುಕಿನ ವಿವಿಧ ಮಜಲುಗಳು ಕಂಡುಬರಲು ಕಾರಣ ಅವರ ತಂದೆ ಸುಭೇದಾರ್ ರಾಮ್‌ಜೀ ಸಕ್ಪಾಲ್ ಅವರು ಬ್ರಿಟಿಷ್ ಸೈನಿಕ ಶಾಲೆಯಲ್ಲಿ ಶಿಕ್ಷಕರಾಗಿ, ಆನಂತರದ ದಿನಗಳಲ್ಲಿ 15 ವರ್ಷಗಳ ಕಾಲ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯನ್ನು ಹೊಂದಿದ್ದರು. ನಿವೃತ್ತಿಯ ನಂತರ ಬರುತ್ತಿದ್ದ ವೇತನವು ಕುಟುಂಬದ ನಿರ್ವಾಹಣೆಗಾಗಿ ಸಾಕಾಗುತ್ತಿಲ್ಲದ ಕಾರಣವಾಗಿಯೇ ಗೋರೆಗಾವ್ ಎಂಬದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸ್ಟೋರ್‌ಕೀಪರ್ ಆಗಿ ಅರೆಕಾಲೀಕ ನೌಕರಿಗೆ ಸೇರಿದ್ದರು. ಈ ಸಂದರ್ಭದಲ್ಲಿ ರಾಮ್‌ಜೀ ಸಕ್ಪಾಲ್ ಅವರು ತಮ್ಮ ಕುಟುಂಬ ವರ್ಗವನ್ನು ಸತರಾದಿಂದ ಪೂನಾ ನಗರಕ್ಕೆ ಸ್ಥಳಾಂತರಿಸಿದರು. ಪೂನಾದಲ್ಲಿನ ಒಂದು ಕಾರ್ಮಿಕ ಕಾಲೋನಿಯೊಂದರಲ್ಲಿ ಚಿಕ್ಕದೊಂದು ಕೊಠಡಿಯನ್ನು ಬಾಡಿಗೆಗೆ ಪಡೆದು ವಾಸಿಸಲು ಅನುವು ಮಾಡಿಕೊಟ್ಟಿದ್ದರು. ಇಲ್ಲಿನ ವಾಸದ ಸಂದರ್ಭದಲ್ಲಿನ ಪರಿಸರವು ಬಾಲ್ಯದಲ್ಲಿಯೇ ಅಂಬೇಡ್ಕರ್ ಅವರಿಗೆ ಅತೀವ ಪ್ರಭಾವ ಬೀರುವ ಮೂಲಕ ಅಲ್ಲಿನ ಕಾರ್ಮಿಕರ ಸಮಷ್ಠಿ ಸಮಸ್ಯೆಗಳು ಅರಿವಿಗೆ ಬಂದಿರುತ್ತದೆ. ಅಂಬೇಡ್ಕರ್ ಅವರ ಬಾಲ್ಯದ ಬದುಕು ಹೆಚ್ಚಿನ ರೀತಿಯಲ್ಲಿ ಕಾರ್ಮಿಕರ ಬದುಕಿನ ಬವಣೆಯ ಮಧ್ಯದಲ್ಲಿಯೇ ಕಳೆದಿರುವುದು ಚರಿತ್ರೆಯೇ ಆಗಿರುತ್ತದೆ.

ಕಾರ್ಮಿಕರ ಕಾಲೋನಿಯಲ್ಲಿ ವಾಸಿಸುತ್ತಿದ್ದಂಥ ಕಾಲಸಂದರ್ಭದಲ್ಲಿ ಪ್ರತಿನಿತ್ಯ ಬಾಲಕ ಭೀಮ ಶಾಲೆಗೆ ಹೋಗುತ್ತಿದ್ದಾಗ, ಆ ಶಾಲೆಯಲ್ಲಿದ್ದಂಥ ಮಾಸ್ತರೊಬ್ಬರು ಜೂಲಿಯೆಟ್–ಸಿಜ಼ರ್ ನಾಟಕದ

1.ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ದೃಷ್ಟಾಂತವನ್ನು ತುಂಬ ಕರಾರುವಕ್ಕಾಗಿ ಬೋಧಿಸಿದ್ದರು. ಈ ಮಾಸ್ತರರ ಬೋಧನೆಯ ಶೈಲಿಯು ಬಾಲಕ ಭೀಮನ ಮೇಲೆ ಅತೀವ ಪ್ರೇರಣೆ ಮತ್ತು ಪ್ರಭಾವನ್ನು ಕೂಡ ಬೀರಿತ್ತು. ಈ ಪ್ರೇರಣೆ ಅಷ್ಟಕ್ಕೆ ಮುಗಿಯದೇ ಆ ಪುಸ್ತಕವನ್ನು ಕೊಂಡುಕೊಳ್ಳುವ ಮಟ್ಟಕ್ಕೂ ಕೂಡ ಹೋಯಿತು. ಈ ಪುಸ್ತಕವು ಅವರ ವಾಸದ ಮನೆಯಿದ್ದ ರಸ್ತೆಯ ತಿರುವಿನಲ್ಲಿ ಒಂದು ಚಿಕ್ಕದಾದ ಅಂಗಡಿಯೊಂದರಲ್ಲಿ ನೇತು ಹಾಕಿರುವುದು ಬಾಲಕ ಭೀಮನ ಕಣ್ಣಿಗೆ ಬಿತ್ತು. ಬಾಲಕ ಭೀಮ ಅಂಗಡಿಯ ಮಾಲೀಕನನ್ನು ಪುಸ್ತಕ ಕೊಡುವಂತೆ ಕೇಳಿದನು. ಆದರೆ ಆ ಅಂಗಡಿಯ ಮಾಲೀಕ್‌ನು ಉಚಿತವಾಗಿ ಕೊಡಲು ನಿರಾಕರಿಸಿ, ಅದಕ್ಕೆ ಹಣವನ್ನು ನೀಡಬೇಕು ಎಂದು ಹೇಳಿದನು. ಪುಸ್ತಕವನ್ನು ಕೊಂಡುಕೊಳ್ಳಲು ಬಾಲಕ ಭೀಮ ತಮ್ಮ ಬಡಾವಣೆಯಿಂದ ಹಲವಾರು ಕಾರ್ಮಿಕರು ಹತ್ತಿರದಲ್ಲಿಯೇ ಇದ್ದಥ ಕಾರ್ಖಾನೆಗಳಲ್ಲಿ ಕಾರ್ಮಿಕ ವೃತ್ತಿಯಲ್ಲಿ ತೊಡಗಿದ್ದರು. ಈ ಕಾರ್ಮಿಕರು ತಾವು ಕಾರ್ಖಾನೆಗೆ ಊಟವನ್ನು ತುಂಬಿದ ಡಬ್ಬಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಮಧ್ಯಾಹ್ನದ ವೇಳೆಗೆ ಡಬ್ಬಿಗಳು ಖಾಲಿಯಾಗುತ್ತಿದ್ದವು. ಆ ಖಾಲಿಯಾಗಿರುವ ಡಬ್ಬಿಗಳನ್ನು ಕಾರ್ಖಾನೆಗೆ ಬಾಲಕ ಅಂಬೇಡ್ಕರ್ ಹೋಗಿ ತೆಗೆದುಕೊಂಡು ಬಂದು ಕಾರ್ಮಿಕರ ಮನೆ-ಮನೆಗಳಿಗೆ ತೆರಳಿ ಜೋಪಾನವಾಗಿ ತಲುಪಿಸುವ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಆವಾಗ ಕಾರ್ಮಿಕರು ಬಾಲಕ ಅಂಬೇಡ್ಕರ್ ಅವರಿಗೆ ಚಿಲ್ಲರೆಯಾಗಿ ಒಂದು ಆಣೆ-ಎರಡಾಣೆಗಳನ್ನು ಕೊಡುತ್ತಿದ್ದರು. ಈ ಮಾದರಿಯಲ್ಲಿ ಹಣವನ್ನು ಶೇಖರಿಸಿ ಅಂಗಡಿಗೆಯ ಮಾಲೀಕನಿಗೆ ಹಣವನ್ನು ನೀಡಿ ಆ ಜೂಲಿಯೆಟ್ ಸೀಜ಼ರ್ ನಾಟಕದ ಪುಸ್ತಕವನ್ನು ತೆಗೆದುಕೊಂಡು ಓದಲು ಆರಂಭಿಸಿ, ಅಂಬೇಡ್ಕರ್ ಅವರು ಬಾಲ್ಯದಲ್ಲಿಯೇ ಈ ತೆರನಾದ ಹಲವು -ಹತ್ತು ಚರಿತ್ರೆಗಳನ್ನು ತಿಳಿದುಕೊಂಡಿರುವುದು ಕಂಡುಬರುತ್ತದೆ. ಆದ್ದರಿಂಲೇ ಅಂಬೇಡ್ಕರ್ ಅವರಿಗೆ ಬಾಲ್ಯದ ಬದುಕಿನ ಕಾಲಸಂದರ್ಭದಲ್ಲಿಯೇ ಕಾರ್ಮಿಕರ ಬಗೆಗಿನ ಪ್ರೀತಿ, ಕಾಳಜಿ, ಅವರ ಬದುಕು-ಬವಣೆಗಳು ಅರಿವಿಗೆ ರಕ್ತಗತವಾಗಿಯೇ ಬಂದಿರುತ್ತದೆ. ಆ ಕಾರಣವಾಗಿಯೇ ಮುಂದೆ ಅವರು ವಿದೇಶಿ ಶಿಕ್ಷಣವನ್ನು ಪೂರೈಸಿ ಭಾರತಕ್ಕೆ ಬಂದಾಗ ಕಾರ್ಮಿಕ ಪರವಾಗಿ ಗಟ್ಟಿಯಾದ ಧ್ವನಿ ಎತ್ತಿರುವುದು ಜಾಗತಿಕ ಸತ್ಯ.

ರಾಮ್‌ಜೀ ಸಕ್ಪಾಲ್ ಮತ್ತು ಭೀಮಬಾಯಿ ಆದರ್ಶನೀಯ ದಂಪತಿಗಳಿಗೆ 14 ಮಕ್ಕಳು ಜನಿಸಿದ್ದವು. ಆದರೆ ಬದುಕುಳಿದವು ಮಾತ್ರ ಐದು. ಇನ್ನೂ ಒಂಭತ್ತು ಮಕ್ಕಳು ಆಕಾಲಿಕ ಮರಣಕ್ಕೆ ಗುರಿಯಾಗಿದ್ದವು. ಈ ಬದುಕುಳಿದವರಲ್ಲಿ ಅಣ್ಣಂದಿರಾದ ಬಲರಾಮ, ಆನಂದರಾವ್ ಮತ್ತು ಅಕ್ಕಂದಿರಾದ ತುಳಸಿ, ಮಂಜುಳ. ಇವರು ತಮ್ಮ ತಂದೆಯವರಿಗೆ ಬರುತ್ತಿದ್ದ ನಿವೃತ್ತಿ ವೇತನದಿಂದ ಕುಟುಂಬದ ನಿರ್ವಾಹಣೆಯು ತುಂಬ ಕಷ್ಟಕರವಾಗಿತ್ತು. ಅದನ್ನು ಸರಿದುಗಿಸಲು ಮುಂಬಾಯಿಗೆ ಹೋಗಿ ಯಾವುದಾದರು ಹತ್ತಿ ಕಾರ್ಖಾನೆಗಳಲ್ಲಿ ಕೆಲಸಗಳಿಗೆ ಸೇರಿಕೊಂಡು ತಂದೆಗೆ ಸಹಾಯ ಮಾಡಬೇಕೆಂದು ಒಂದು ರಾತ್ರಿ ಮಾತಾನಾಡಿಕೊಳ್ಳುತ್ತಿದ್ದರು. ಇದನ್ನು ಬಹುಸೂಕ್ಷ್ಮವಾಗಿಯೇ ಗ್ರಹಿಸಿರುವ ಬಾಲಕ ಭೀಮ ಕೂಡ ತಾನು ಮುಂಬಾಯಿಗೆ ಹೋಗಿ ಕಾರ್ಖಾನೆಗಳಲ್ಲಿ ಕೆಲಸವನ್ನು ಮಾಡಿ ತಂದೆಗೆ ಸಹಾಯ

ಮಾಡುವ ಅಭಿಲಾಷೆಯನ್ನು ಸೋದರ–ಸೋದರಿಯರ ಮುಂದೆ ಇಟ್ಟರು. ಆದರೆ, ಭೀಮ ಇಟ್ಟಾಂಥ ಬೇಡಿಕೆಯನ್ನು ತಿರಸ್ಕರಿಸಿದರು. ಆದರೂ ಛಲಗಾರ ಹಠ ಬಿಡದ ಭೀಮ ತಯಾರಿಯನ್ನು ಮಾಡಿಕೊಳ್ಳಲು ಸಿದ್ಧರಾದರು. ಆದರೆ ಪೂನಾದಿಂದ ಮುಂಬಾಯಿಗೆ ಪ್ರಯಾಣಿಸಲು ರೈಲು ಟಿಕೇಟ್‌ನ್ನು ಕೊಳ್ಳಲು ಹಣದ ಕೊರತೆಯಿರುತ್ತದೆ. ಆವಾಗ ಒಂದು ಉಪಾಯವು ಇವರ ಅರಿವಿಗೂ ಬಂದಿರುತ್ತದೆ. ಈ ಉಪಾಯವು ಬಾಲಕ ಭೀಮನಿಗೆ ಸಾಹಸದ ಕೆಲಸವೇ ಆಗಿರುತ್ತದೆ. ಅದೇ ಅವರ ಸೋದರತ್ತೆಯಾದ ಮೀರಾಬಾಯಿ ಅವರ ಹತ್ತಿರ ಇದ್ದ ಬಾಯಿದಾರದ ಕೈ ಚೀಲ. ಈ ಕೈ ಚೀಲವನ್ನು ವಶಕ್ಕೆ ಪಡೆಯಲು ಮೂರು ದಿನಗಳು ಪ್ರಯತ್ನಿಸಿದ ಪ್ರತಿಫಲವಾಗಿಯೇ ನಾಲ್ಕನೇಯ ದಿನಕ್ಕೆ ತಮ್ಮ ವಶಕ್ಕೆ ಬಂದಿರುತ್ತದೆ. ಆದರೆ, ಆ ಕೈ ಚೀಲದಲ್ಲಿ ರೈಲು ದರಕ್ಕೆ ಬೇಕಾದಷ್ಟು ಹಣ ಇರದೇ ಇರುವುದು ತುಂಬ ನೋವಾಗಿರುತ್ತದೆ. ಅಂದರೆ, ಈ ಸನ್ನಿವೇಶಗಳು ಕೂಡ ಪ್ರಬುದ್ಧ ಮಾನಕ್ಕೆ ಬಂದಂಥ ಸಾಮ್ರಾಟ್ ಅಂಬೇಡ್ಕರ್ ಅವರು ಕಾರ್ಮಿಕರ ಪರ ಅವಕಾಶ ಸಿಕ್ಕಾಗಲೇಲ್ಲ ಧ್ವನಿ ಎತ್ತಲು, ಹಾಗೆಯೇ ಕಾರ್ಮಿಕ ಬಹುದೊಡ್ಡ ನಾಯಕರಾಗಿ ಹೊರಹೊಮ್ಮಲು ಸಾಧ್ಯವಾಗಿರುತ್ತದೆ.

ಅಂಬೇಡ್ಕರ್ ಅವರು ಬ್ಯಾರಿಸ್ಟರ್‌ರಾಗಿ ಕಾರ್ಯ ನಿರ್ವಹಿಸುವಾಗ ಮುಂಬಾಯಿಯ ನಗರಾಭಿವೃದ್ಧಿ ಇಲಾಖೆಯವರು ಪರೇಳ್‌ನಲ್ಲಿ ಕಟ್ಟಿಸಿದ್ದ ಒಂದು ಚಾಳ್‌ನಲ್ಲಿ ವಾಸವಾಗಿದ್ದರು. ಈ ಚಾಳ್ ಐದು ಮಹಡಿಯ ಕಟ್ಟಡವಾಗಿತ್ತು. ಇದರಲ್ಲಿ ನೂರಾರು ಮನೆಗಳಿದ್ದವು. ಆ ಮನೆಗಳಲ್ಲಿ ಬಹುತೇಕ ಜನರು ಸರಿಸುಮಾರು 25 ರೂಪಾಯಿಗಳ ವೇತನವನ್ನು ಪಡೆಯುತ್ತಿದ್ದಂಥ ಮಿಲ್‌ನ ಕಾರ್ಮಿಕರೇ ವಾಸವಾಗಿದ್ದರು. ಇಲ್ಲಿನ ವಾಸದ ಪರಿಸರವು ಅಂಬೇಡ್ಕರ್ ಅವರಿಗೆ ಮುಂಬಾಯಿ ಮಹಾನಗರದ ಕಾರ್ಮಿಕ ವರ್ಗದವರ ಜೀವನವು ನೇರವಾಗಿಯೇ ಪರಿಚಯವಾಗಿತ್ತು. ಆ ಮುಖೇನ ನೂರಾರು ಜನ ಮಿಲ್‌ನ ಕಾರ್ಮಿಕರು ಪರಿಚಯವಾಗಿದ್ದರು. ಹಾಗಾಗಿಯೇ ಅವರ ತಮ್ಮ ಬದುಕಿನ ನೋವುಗಳನ್ನು ಮುಕ್ತವಾಗಿ ಹಂಚುಕೊಳ್ಳುತ್ತಿದ್ದರು. ಇದರಿಂದಲೇ ಅಂಬೇಡ್ಕರ್ ಅವರು ಕಾರ್ಮಿಕರಿಗೆ ನ್ಯಾಯವನ್ನು ಒದಗಿಸಿಕೊಡಲು ಹೋರಾಟವನ್ನು ಮಾಡುವ ಮೂಲಕ ರಕ್ಷಣೆಯನ್ನು ಗಳಿಸಿಕೊಟ್ಟಿರುತ್ತಾರೆ.

ಭಾರತದ ಸಮಗ್ರ ಚರಿತ್ರೆಯ ಪುಟಗಳಲ್ಲಿ ರಚಿತಗೊಂಡಿರುವ ಸ್ಮೃತಿಗಳಿಂದ ತಾರತಮ್ಯತೆ, ಅಸಮಾನತೆ ಹಾಗೂ ಅನ್ಯಾಯಗಳೇ ಹೆಚ್ಚಿನ ರೀತಿಯಲ್ಲಿ ಅನುಷ್ಠಾನದಲ್ಲಿ ಇತ್ತು. ಅದರಲ್ಲೂ ಈ ನೆಲದ ಮೂಲನಿವಾಸಿಗಳಾದ ಅಸ್ಪೃಶ್ಯ ಜನವರ್ಗವೂ ಈ ಎಲ್ಲ ರೀತಿಯಲ್ಲಿನ ಅಸಮಾನತೆಗೆ ಗುರಿಯಾಗಿದ್ದವು. ಪುರಾಣ ಗ್ರಂಥಗಳಲ್ಲಿ ಆರ್ಥಿಕತೆಯು ಹೆಚ್ಚಿನ ರೀತಿಯಲ್ಲಿ ರಾಜಪ್ರಭುತ್ವದಲ್ಲಿತ್ತು. ಇವರೇ ಸಮಷ್ಠಿ ಆರ್ಥಿಕ ಕ್ಷೇತ್ರವನ್ನು ನಿಯಂತ್ರಿಸುತ್ತಿದ್ದರು. ಭೂಮಿ ಹಾಗೂ ಪ್ರಧಾನ ಕೈಗಾರಿಕೆಗಳು ಇವರ ಸಂಪೂರ್ಣ ಒಡೆತನದಲ್ಲಿದ್ದವು. ಈ ಭೂ ಒಡೆತನದಿಂದಾಗಿಯೇ ಇನಾಂಧಾರಿ, ಮಹಾಲ್ದಾರಿ, ಜಹಗೀಂದಾರ್, ಜಮೀನ್ದಾರಿ ಹಾಗೂ ಜೋತಿದಾರ್ ಪದ್ಧತಿಗಳು ಚಾಲ್ತಿಗೆ ತಂದು, ಆ ಮುಖೇನ ಭೂಮಿಯ ಒಡೆತನವು ಕೆಲವೇ ಕೆಲವರ ಹಿಡಿತ ಹಾಗೂ ಒಡೆತನದಲ್ಲಿ ಇಡಲಾಗಿತ್ತು.

ಭಾರತದಲ್ಲಿ ಕಾರ್ಮಿಕರ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ತಪ್ಪಿಸಲು ಪ್ರಥಮ ಬಾರಿಗೆ ಪ್ರಯತ್ನಿಸಿದವರು ಅಂಬೇಡ್ಕರ್. ಇವರು ಭಾರತೀಯ ಶೋಷಕ ಜನವರ್ಗ ಹಾಗೂ ಬ್ರಿಟಿಷರೊಟ್ಟಿಗೆ ಏಕಕಾಲಕ್ಕೆ ಸಂವಿಧಾನಾತ್ಮಕ ಮಾದರಿಯ ಸಮರವನ್ನು ಸಾರಿದವರು. ಆ ಮುಖೇನ ಸಮಗ್ರ ಕಾರ್ಮಿಕ ಜನವರ್ಗವನ್ನು ಭಾರತದಲ್ಲಿ ಸಂಘಟಿಸಿ, ಒಂದು ಸಂಘಟನಾತ್ಮಕ ಹೋರಾಟಕ್ಕೆ ತಳಪಾಯವನ್ನು ಕಟ್ಟಿಕೊಟ್ಟವರು ಅಂಬೇಡ್ಕರ್. ಈ ಸಂಘಟಿತ ಹೋರಾಟದ ಪ್ರಥಮ ಹಂತವಾಗಿಯೇ 1936ನೇ ಆಗಸ್ಟ್ 15ರಂದು ಒಂದು ಸ್ವತಂತ್ರ ಕಾರ್ಮಿಕ ಪಕ್ಷವನ್ನು ಕಟ್ಟಿದರು. ಇದು ಒಂದು ರಾಜಕೀಯ ಪಕ್ಷವಾಗಿ ತನ್ನ ಕಾರ್ಯಚರಣೆಯನ್ನು ಮಾಡಿರುತ್ತದೆ. ಈ ಸ್ವತಂತ್ರ ಕಾರ್ಮಿಕ ರಾಜಕೀಯ ಪಕ್ಷವು ರೂಪಿಸಿಕೊಂಡಿರುವ ಪ್ರಣಾಳಿಕೆಯಲ್ಲಿನ ಧ್ಯೇಯ್ಯೋದ್ದೇಶಗಳೆಲ್ಲವೂ ಕಾರ್ಮಿಕ ಸಮುದಾಯವನ್ನು ಬಿಡುಗಡೆಗೊಳಿಸಿ, ಅವರಿಗೆ ನ್ಯಾಯಸಮ್ಮತವಾಗಿ ದೊರಕಬೇಕಾಗಿದ್ದ ಎಲ್ಲವನ್ನು ಗಳಿಸಿಕೊಟ್ಟು ಅವರನ್ನು ಸಬಲೀಕರಣಗೊಳಿಸುವುದೇ ಆಗಿರುತ್ತದೆ. ಹಾಗೆಯೇ ಕಾರ್ಮಿಕರ ವಿಮೋಚನೆಯೇ ಈ ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಥಮ ಪ್ರಾಸಸ್ತ್ಯವಾಗಿರುತ್ತದೆ.

ಅಂಬೇಡ್ಕರ್ ಅವರು ಕಾರ್ಮಿಕರ ಪರವಾದ ಪ್ರತಿಪಾದನೆಯಿಂದ ಹೆಚ್ಚು ಪ್ರಭುದ್ಧಮಾನಕ್ಕೆ ಬಂದರು. ಈಗಾಗಲೇ ಭಾರತವನ್ನು ಆಳುತ್ತಿದ್ದಂಥ ಬ್ರಿಟಿಷ್ ಪ್ರಭುತ್ವವು ಇವರ ಪ್ರಭುದ್ಧತೆ ಹಾಗೂ ವಿಶ್ವಮಟ್ಟದ ಜ್ಞಾನಕ್ಕೆ ಮನ್ನಣೆಯನ್ನು ನೀಡಿತ್ತು. ಆ ಕಾರಣ ಮತ್ತು ಪರಿಣಾಮವಾಗಿಯೇ 1927ನೇ ಫೆಬ್ರವರಿ 18ರಲ್ಲಿಯೇ ಮುಂಬಾಯಿಯ ಪ್ರೆಸ್ಸಿಡೆನ್ಸಿ ಸಭೆಗೆ ಸದಸ್ಯರಾಗಿ ನೇಮಕವನ್ನು ಮಾಡಿಕೊಂಡಿದ್ದರು. ಮತ್ತೇ ಅದೇ ಸರ್ಕಾರವು 1932ರಲ್ಲಿ ಪುನರ್ ನೇಮಕ ಮಾಡಿಕೊಂಡಿತ್ತು. ಈ ಸಂದರ್ಭದಲ್ಲಿಯು ಅಂಬೇಡ್ಕರ್ ಅವರು ಕಾರ್ಮಿಕರ ಪರವಾದ ಧ್ವನಿಯನ್ನು ಎತ್ತಿದ್ದರು. ಅದರಿಂದಲೇ ಕಾರ್ಮಿಕ ನೀತಿಯಲ್ಲಿ ಬದಲಾವಣೆಯ ಗಾಳಿಯು ಬೀಸಲಾರಂಭಿಸಿತ್ತು. ವೈಸ್‌ರಾಯ್ ಲಾರ್ಡ್ ಲಿಗ್‌ಲಿಡ್‌ಗೋ ಅವರಿಗೆ ಮುಂಬಾಯಿಯ ಗೌರ್ನರ್ ಆಗಿದ್ದಂಥ ಲುಮ್ಮೆ ಅವರು ಸಲ್ಲಿಸಿದ್ದ ವರದಿಯಲ್ಲಿ ಅಂಬೇಡ್ಕರ್ ಅವರು ಈ ಹಿಂದೆ ಕಾರ್ಯಕಾರಿ ಮಂಡಳಿಯಲ್ಲಿ ತಮ್ಮನ್ನು ಸೇರಿಸಿರಲ್ಲಿಲ್ಲವೆಂದು ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಆದ್ದರಿಂದಲೇ ಅಂಬೇಡ್ಕರ್ ಅವರನ್ನು ಕಾರ್ಯಕಾರಿ ಮಂಡಳದಲ್ಲಿ ಸೇರಿಸಿಕೊಳ್ಳುವಂತೆ ಶಿಫಾರಸ್ಸು ಮಾಡಿದರು. ಶಿಫಾರಸ್ಸನ್ನು ಪರಿಗಣಿಸಿದಂಥ ಬ್ರಿಟಿಷ್ ಪ್ರಭುತ್ವವು ಅಂಬೇಡ್ಕರ್ ಅವರ ಹೆಸರನ್ನು ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಲದಲ್ಲಿ 1942ನೇ ಜುಲೈ 02 ರಂದು ಸೇರಿಸಲಾಗಿರುತ್ತದೆ. ಇದರಿಂದಲೇ ಭಾರತೀಯರ ಬಲವು 14ಕ್ಕೆ ಏರಿತು. ಹಾಗೆಯೇ ಭಾರತ ದೇಶದ ಚರಿತ್ರೆಯ ಸಂದರ್ಭದಲ್ಲಿ ಅಸ್ಪೃಶ್ಯರೊಬ್ಬರು ಭಾರತೀಯ ಸರ್ಕಾರದ ಕಾರ್ಯಕಾರಿ ಮಂತ್ರಿ ಮಂಡಲದಲ್ಲಿ ಸದ್ಯಸ್ಯರಾಗಿ ನೇಮಕವಾದ್ದದ್ದು ಪ್ರಥಮವೇ ಆಗಿರುತ್ತದೆ. ಅಂಬೇಡ್ಕರ್ ಅವರಲ್ಲಿದ್ದ ವೈಯುಕ್ತಿಕ ಜ್ಞಾನ ಹಾಗೂ ಕಾರ್ಮಿಕರ ಬಗೆಗಿನ ಕಾಳಜಿಯನ್ನು ಗುರುತಿಸಿದ್ದಂಥ ಬ್ರಿಟಿಷ್ ಸರ್ಕಾರವು

ಅಧಿಕೃತವಾಗಿ 1942ನೇ ಜುಲೈ 20 ರಂದು ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ನೇಮಕವನ್ನು ಮಾಡಿತು.

ಅಂಬೇಡ್ಕರ್ ಅವರಿಗೆ ಅಧಿಕೃತವಾಗಿ ನಾಗಪುರದಿಂದ ತಂತಿ ಸಂದೇಶವು ರವಾನೆಯ ಬಂದಿರುತ್ತದೆ. ಮೂಲಕ ಈ ದೇಶದ ಪ್ರಥಮ ಕಾರ್ಮಿಕ ಮಂತ್ರಿಯಾಗಿ 1942ನೇ ಜುಲೈ 30 ರಂದು ಅಧಿಕಾರವನ್ನು ವಹಿಸಿಕೊಂಡರು. ಈ ನಿಯೋಜಿತ ಶಾಸನೀಯ ಅಧಿಕಾರವನ್ನು ಪಡೆದುಕೊಳ್ಳುವ ಸಲುವಾಗಿಯೇ ಅಂಬೇಡ್ಕರ್ ಅವರು ಕಾರ್ಮಿಕ ಇಲಾಖೆಯ ಸಚಿವರಾಗಿ ವೈಸ್‌ರಾಯ್ ಕಾರ್ಯಕಾರಿ ಮಂಡಳಿಯಲ್ಲಿ ಕೆಲಸಮಾಡಲು ಒಪ್ಪಿಕೊಂಡಿರುವುದು ಕಂಡುಬಂದಿರುತ್ತದೆ. ಅಂಬೇಡ್ಕರ್ ಅವರ ಗ್ರಹಿಕೆಯ ಪ್ರಕಾರ ಒಂದು ವೇಳೆ ಈ ಮಂಡಳಿಯಲ್ಲಿ ಕೆಲಸ ಮಾಡಲು ಒಪ್ಪಿಕೊಳ್ಳದಿದ್ದರೆ ಅಸ್ಪೃಶ್ಯರು ರಾಜ್ಯಭಾರ ಮಾಡುವ ಜನಾಂಗವಾಗಲಾರದು ಎಂಬುದೇ ಆಗಿತ್ತು. ಯಾವ ಜನಾಂಗಕ್ಕೆ ಆಗಲೀ ಎಂದೂ ಅವರ ಸ್ವಾತಂತ್ರ್ಯವಾದಂಥ ಬಾಳ್ವೆಗೆ ಆಧಮ್ಯ ಶಕ್ತಿ ಬೆಳೆಯುವಂತೆ ತಾವು ಶ್ರಮಿಸುವುದಾಗಿ ಸ್ಪಷ್ಟವಾಗಿಯೇ ತಿಳಿಸಿದ್ದಾರೆ. 1942ನೇ ಜುಲೈ 27 ರಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗೆ ಹೇಳಿಕೆ ನೀಡುತ್ತಾ; **ಕಾರ್ಮಿಕ ವರ್ಗದವರಿಗೂ ಕಾರ್ಖಾನೆಯ ಯಜಮಾನರಿಗೂ ಉಂಟಾಗುವ ಯಾವುದೇ ಕಲಹಗಳಲ್ಲೂ ತಾವು ಕಾರ್ಮಿಕರ ಪರ** ಎಂದು ತಮ್ಮದೇ ಆದ ರೀತಿಯಲ್ಲಿ ಪ್ರತಿಪಾದಿಸಿರುವ ವ್ಯಕ್ತಿತ್ವ ಅವರದು. ಭಾರತದಲ್ಲಿ ಕಾರ್ಮಿಕ ಸರ್ಕಾರವನ್ನು ರಚಿಸುವುದಾಕ್ಕಾಗಿ ಕೆಲಸ ಮಾಡಬೇಕು ಎಂಬು ಇವರವಾದ. ಭಾರತ ದೇಶಕ್ಕೆ ಸ್ವರಾಜ್ಯ ಬರುವುದಷ್ಟೇ ಸಾಕಗಲ್ಲ. ಆ ಸ್ವರಾಜ್ಯವು ಯಾರ ಆಡಳಿತದಲ್ಲಿರುತ್ತದೆ ಎಂಬುದು ಬಹುಮುಖ್ಯ ಎಂದಿರುವುದು ಮಹತ್ವದಾಗಿರುತ್ತದೆ.

ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿರುವ ಅಂಬೇಡ್ಕರ್ ಅವರು ಕಾರ್ಮಿಕ ಸಚಿವರು ಕೂಡ ಆದರು. ಈ ಕಾರ್ಮಿಕ ಸಚಿವಾಲಯದ ವ್ಯಾಪ್ತಿಯಲ್ಲಿ ಸರಿಸುಮಾರು 18 ಖಾತೆಗಳು ಬಂದಿದ್ದವು. ಅವುಗಳನ್ನು ಜವಾಬ್ದಾರಿಯುತವಾಗಿಯೇ ನಿರ್ವಹಿಸಿದ್ದರು. ಕಾರ್ಮಿಕ ಸಚಿವರಾಗಿ ಸದನದ ಒಳಗೆ ಮತ್ತು ಹೊರಗೆ ಕಾರ್ಮಿಕರ ಹಕ್ಕು-ಬಾಧ್ಯತೆಗಳ ಬಗೆಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಿ ಹಲವು-ಹತ್ತು ಕಾನೂನು-ಕಾಯಿದೆಗಳು ಜಾರಿಗೆ ಬರಲು ಕಾರಣಕರ್ತರಾದರು. ಈ ಮುಖೇನ ಅಂಬೇಡ್ಕರ್ ಅವರು ಕಾರ್ಮಿಕ ಕಲ್ಯಾಣಕ್ಕೆ ತಮ್ಮದೇ ಆದಂಥ ಕೊಡುಗೆಯನ್ನು ನೀಡಿದರು. ಹಾಗೆಯೇ ಈ ಸಂದರ್ಭದಲ್ಲಿ ರೈತ ಮತ್ತು ಕಾರ್ಮಿಕರ ಪರವಾದ ಚಳವಳಿಗಳನ್ನು ಏಕಕಾಲಕ್ಕೆ ಹಮ್ಮಿಕೊಂಡು, ಯಾವುದೇ ರಾಷ್ಟ್ರದಲ್ಲಿಯು ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಸಮಷ್ಠಿ ಕಾರ್ಮಿಕರ ಶ್ರಮ ಮತ್ತು ಶಕ್ತಿಯು ಹೆಚ್ಚಿನ ರೀತಿಯಲ್ಲಿರುತ್ತದೆ. ಆದ್ದರಿಂದಲೇ ಕೃಷಿ ಕ್ಷೇತ್ರದಲ್ಲಿ ರೈತರು ಮತ್ತು ಕೃಷಿಕೂಲಿ ಕಾರ್ಮಿಕರು ದೇಶದಲ್ಲಿನ ಸಮಗ್ರ ಜನತೆಗೆ ಆಹಾರದ ಭದ್ರತೆಯನ್ನು ಒದಗಿಸಿದರೆ, ಕೈಗಾರಿಕಾ ಕಾರ್ಮಿಕರು ಈ ಕೃಷಿ ಮತ್ತು ಸೇವಾ ವಲಯಕ್ಕೆ ಒತ್ತಾಸೆಯಾಗಿಯೇ ನಿಂತು ಅಗತ್ಯವಾದಂಥ ಸಾಧನ - ಸಲಕರಣೆಗಳನ್ನು ಒದಗಿಸಿಕೊಡುತ್ತಾರೆ. ಈ ಕಾರ್ಮಿಕ ವರ್ಗವು ಒಂದು

ರಾಷ್ಟ್ರದ ಸಮಗ್ರ ಆರ್ಥಿಕತೆಯಲ್ಲಿ ಮತ್ತು ಅದರ ಅಭಿವೃದ್ಧಿಯ ಪಥದಲ್ಲಿ ಪ್ರಧಾನತೆಯ ಪಾತ್ರವನ್ನು ನಿರ್ವಹಿಸುತ್ತದೆ.

ನವ ಭಾರತದ ನಿರ್ಮಾತೃವಾಗಿ, ಕ್ರಾಂತಿಕಾರಕ ವ್ಯಕ್ತಿಯಾಗಿರುವ ಅಂಬೇಡ್ಕರ್ ಅವರು ಸರಿಸುಮಾರು 1942 ರಿಂದ 1946ರವರೆವಿಗೂ ಬ್ರಿಟಿಷ್ ಕಾರ್ಯಕಾರಿ ಮಂಡಳಿಯಲ್ಲಿ ಸದಸ್ಯರಾಗಿ ಹಾಗೂ ಕಾರ್ಮಿಕ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ಅವರು ಪ್ರತಿಪಾದಿಸಿ ಜಾರಿಗೊಳ್ಳಲು ಕಾರಣವಾಗಿರುವ ವಿಚಾರಗಳೆಂದರೆ; ಕಾರ್ಖಾನೆಗಳಲ್ಲಿ ಕಾರ್ಮಿಕರು 12 ಗಂಟೆಗಳ ಕಾಲ ಕೆಲಸವನ್ನು ಮಾಡಬೇಕಾಗಿತ್ತು. ಈ ಸಂದರ್ಭದಲ್ಲಿ ಕಾರ್ಮಿಕರಿಗೆ ವಿಶ್ರಾಂತಿಯೇ ಇಲ್ಲದೇ ಅವಿಶ್ರಾಂತಿಯಾಗಿ ದುಡಿಯಬೇಕಾಗಿತ್ತು. ಇದನ್ನು ಮನಗಂಡ ಅಂಬೇಡ್ಕರ್ ಅವರು 12 ಗಂಟೆಯಿದ್ದ ಕಾರ್ಮಿಕರ ಕೆಲಸದ ವೇಳೆಯನ್ನು 08 ಗಂಟೆಗೆ ಕಡಿತಗೊಳಿಸಿದರು. ಇದಕ್ಕೆ ಸಂಬಂಧಿಸಿದಂತೆಯೇ ಕಾಯಿದೆಯು ಜಾರಿಗೆ ಬರಲು ಕಾರಣಕರ್ತರಾದರು.

**ಮಹಿಳಾ ಕಾರ್ಮಿಕರ ಬಗೆಗಿನ ಕಾಳಜಿಗಳು**

ಗಣಿಗಳಲ್ಲಿ ಕೆಲಸಮಾಡುವ ಮಹಿಳೆಯರಿಗೆ ಮಾತೃತ್ವದ ಪ್ರಯೋಜನಗಳ ಕಾಯಿದೆ, ಮಹಿಳಾ ಕಾರ್ಮಿಕ ಕಲ್ಯಾಣ ನಿಧಿ, ಮಕ್ಕಳು ಮತ್ತು ಮಹಿಳೆಯರ ರಕ್ಷಣಾ ಕಾಯಿದೆ, ಮಹಿಳೆಯರಿಗೆ ಹೆರಿಗೆ ಸೌಲಭ್ಯ, ಮಹಿಳೆಯರಿಗೆ ಕಾರ್ಖಾನೆಯ ಉದ್ಯೋಗದಲ್ಲಿ ನಿಷೇಧವನ್ನು ಮಾಡದಿರುವುದು, ಕೋಲಾ ಭೂಗತ ಗಣಿಗಳಲ್ಲಿ ಕೆಲಸ ಮಾಡಲು ಅವಕಾಶವನ್ನು ನೀಡುವುದು, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದು. ಅಂಬೇಡ್ಕರ್ ಅವರು ಮಹಿಳಾ ಪರವಾದಿಯಾಗಿ ಅವರ ದಮನಿತ ಬದುಕು ಮತ್ತು ನೋವವನ್ನು ಬಲು ಹತ್ತಿರದಿಂದ ಕಂಡವರು. ಅದರಲ್ಲೂ ಕಾರ್ಮಿಕ ಮಹಿಳೆಯರ ಸ್ಥಿತಿ ಇನ್ನೂ ದಯಾನೀಯವಾಗಿತ್ತು. ಆದ್ದರಿಂದಲೇ ಕಾರ್ಮಿಕರಲ್ಲಿಯೇ ಹೆಚ್ಚು ಬಲುಪಶುವಾಗುತ್ತಿದ್ದ ಮಹಿಳೆಯರಿಗೆ ಕಾನೂನಿನ ರೀತ್ಯವೇ ರಕ್ಷಣೆಯನ್ನು ಒದಗಿಸಿಕೊಡುವಲ್ಲಿ ಇವರ ಪಾತ್ರ ಚಾರಿತ್ರಿಕವಾದದ್ದು.

**ಕಾರ್ಮಿಕರ ಅಭಿವೃದ್ಧಿಗೆ ಕಾಯಿದೆಗಳ ರಚನೆ ಮತ್ತು ಹೊಸ ನೀತಿಗಳು**

1942ನೇ ಆಗಸ್ಟ್ 07 ರಂದು ದೆಹಲಿಯಲ್ಲಿ ನಡೆದಿರುವ ತ್ರಿಪಕ್ಷೀಯ ಸಮ್ಮೇಳನದಲ್ಲಿ ಅಂಬೇಡ್ಕರ್ ಅವರು ಭಾಗವಹಿಸಿದರು. ಹಾಗೆಯೇ, ಈ ಸಮ್ಮೇಳನದಲ್ಲಿ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾಗಿ ಕಾರ್ಮಿಕರ ಸಮಷ್ಠಿ ಕಲ್ಯಾಣಕ್ಕಾಗಿ ಸಮ್ಮೇಳನದಲ್ಲಿ ಬಹುಮುಖ್ಯ ಉದ್ದೇಶಗಳನ್ನು ಮಂಡಿಸಿದರು. ಆ ಉದ್ದೇಶಗಳೆಂದರೆ; ಕಾರ್ಮಿಕರ ಕಾಯಿದೆಗಳಲ್ಲಿ ಏಕರೂಪತೆಯನ್ನು ತರುವುದು. ಅದನ್ನು ಸಮಾನತೆಗಾಗಿ ಅಭಿವೃದ್ಧಿ ಪಡಿಸುವುದು. ಕಾರ್ಮಿಕರಿಗೆ ಎದುರಾಗುವಂಥ ಪ್ರತಿಯೊಂದು ವಿವಾದಗಳನ್ನು ನಿವಾರಿಸಿ, ಪರಿಹಾರವನ್ನು ಕಂಡುಕೊಳ್ಳುವ ಸಲುವಾಗಿಯೇ ಒಂದು ಕಾರ್ಯವಿಧಾನವನ್ನು ರಚಿಸುವುದು. ಮಾಲೀಕರು ಮತ್ತು ಕಾರ್ಮಿಕರ ನಡುವಿನ ಅಖಿಲ ಭಾರತದ ಪ್ರಾಮುಖ್ಯತೆ ಹೊಂದಿರುವ ವಿಷಯಗಳನ್ನು ಚರ್ಚಿಸುವುದು. ಭಾರತದಲ್ಲಿ ಕಾರ್ಮಿಕರ ಕಾಯಿದೆಗಳನ್ನು

ಬಲಪಡಿಸುವುದು. ಮಾಲೀಕರು ಮತ್ತು ಕಾರ್ಮಿಕರ ನಡುವೆ ಒದಗಿಬರುವಂಥ ವಿವಾದಗಳನ್ನು ಬಗೆಹರಿಸುವುದು. ಒಂದು ಸರ್ವಸದಸ್ಯರ ಸಮಿತಿ ಮತ್ತು ಸಲಹಾ ಸಮಿತಿಯನ್ನು ರಚಿಸುವುದು.

ಅಂಬೇಡ್ಕರ್ ಅವರು 1942ನೇ ನವೆಂಬರ್ 13 ರಂದು ಮುಂಬಾಯಿಯಲ್ಲಿನ ಅಖಿಲ ಭಾರತೀಯ ರೇಡಿಯೋ ಕೇಂದ್ರದಿಂದಲೇ ಒಂದು ಭಾಷಣವನ್ನು ಮಾಡಿದರು. ಆವಾಗ 2ನೇಯ ಜಾಗತಿಕ ಯುದ್ಧದ ಆರಂಭಿಕ ಕಾಲವೇ ಆಗಿತ್ತು. ಈ ಯುದ್ಧವು ಭೂಮಂಡಲವನ್ನು ಪ್ರಾಂತ್ಯಗಳನ್ನಾಗಿ ವಿಭಜಿಸುವುದಕ್ಕಾ ಮಾಡುವ ಯುದ್ಧವಲ್ಲ. ಕಾರ್ಮಿಕ ವರ್ಗ ನಾಜಿಗಳ ಮೇಲೆ ಜಯಗಳಿಸಲು ಕಾದಾಡಬೇಕು ಎಂದು ಕರೆಯನ್ನು ನೀಡಿದರು. ಯುದ್ಧವನ್ನು ತೊಡೆದು ಹಾಕಲು ಯುದ್ಧದಲ್ಲಿ ಗೆಲ್ಲಬೇಕು ಮತ್ತು ನ್ಯಾಯಸಮ್ಮತವಾಗಿಯೇ ಶಾಂತಿಯನ್ನು ಸ್ಥಾಪಿಸಬೇಕು ಎಂಬುದು ಅಂಬೇಡ್ಕರ್ ಅವರ ನಿಲುವಾಗಿರುತ್ತದೆ. ಫೆಸಿಫಿಕ್ ಸಂಬಂಧೀಯ ಸಮಿತಿಗೆ ಬರೆದಿರುವ ಪತ್ರದಲ್ಲಿ ಅಮೇರಿಕಾದ ಜನವರ್ಗವೂ ಕಾಂಗ್ರೇಸ್ ನಡೆಸುವ ಹಿಂದೂ ಧರ್ಮಸ್ಥರ ಪ್ರಚಾರದಿಂದಲೇ ತಪ್ಪುದಾರಿ ಹಿಡಿಯಬಾರದು ಎಂದು ತಿಳಿಸಿರುವುದು ಅವರ ರಾಷ್ಟ್ರೀಯ ಪ್ರಜ್ಞೆ ಮತ್ತು ಕಾಳಜಿಯನ್ನು ತೊರುತ್ತದೆ. ಆ ಮುಖೇನ ಭಾರತೀಯರೆಲ್ಲರೂ ಸಮಗ್ರತೆ, ಐಕ್ಯತೆಯಿಂದಲೇ ಬದುಕಬೇಕೆಂಬುದೇ ಆಗಿರುತ್ತದೆ. ದೇಶವನ್ನು ಯಾವುದೇ ಧರ್ಮ ಹಾಗೂ ವರ್ಗದ ಹೆಸರಿನಲ್ಲಿ ನಾಯಕರ ಹಿತದೃಷ್ಟಿಯಲ್ಲಿ ಹೊಡೆಯುವುದು ಅಪಾಯಕ್ಕೆ ನಾಂದಿಯಾಗುತ್ತದೆ ಎಂಬುದೇ ಅವರ ತುಡಿತವಾಗಿರುತ್ತದೆ.

ಅಂಬೇಡ್ಕರ್ ಅವರು 1943ನೇ ಮಾರ್ಚ್ 31 ರಂದು ಕೇಂದ್ರೀಯ ಶಾಸನಸಭೆಯಲ್ಲಿ ಯುದ್ಧದಲ್ಲಿ ಗಾಯಾಳುಗಳ (ಪರಿಹಾರ ಮತ್ತು ವಿಮೆ) ಮಸೂದೆಯನ್ನು ಮಂಡಿಸಿದರು. ಹಾಗೆಯೇ ಸದ್ನದಲ್ಲಿ ಈ ಮಸೂದೆಯಲ್ಲಿನ ವಿಚಾರವು ಚರ್ಚೆಗೆ ಬಂದಿರುತ್ತದೆ. ಅಂಬೇಡ್ಕರ್ ಅವರು ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಯುದ್ಧದಲ್ಲಿ ಭಾಗವಹಿಸಿ ಗಾಯಾಳಾಗಿರುವವರಿಗೆ ಮಾಲೀಕರು ವಿಮೆ ಮತ್ತು ಪರಿಹಾರವನ್ನು ನೀಡಬೇಕು ಎಂಬ ಕಾಯಿದೆಯು ಜಾರಿಗೆ ಬರುವಲ್ಲಿ ಶ್ರಮಿಸಿದರು. ಈ ಕಾಯಿದೆಯ ಜಾರಿಯಿಂದಾಗಿ ಎರಡನೇಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಿ ಸಹಸ್ರರಾರು ಸೈನಿಕರು ಸಾವನ್ನಾಪ್ಪಿರುವುದು ಹಾಗೂ ಶಾಶ್ವತ ಅಂಗವೀಕಲರಾಗಿದ್ದರು. ಅವರಿಗೆ ಪರಿಹಾರವನ್ನು ಒದಗಿಸಿಕೊಡುವುದೇ ಅಂಬೇಡ್ಕರ್ ಅವರ ನಿಲುವಾಗಿರುತ್ತದೆ.

ತ್ರಿಪಕ್ಷೀಯ ಕಾರ್ಮಿಕರ ಸಮ್ಮೇಳನವು ನಡೆಸಿದ ಕಾರ್ಮಿಕರ ಸ್ಥಾಯಿ ಸಮಿತಿಯ 31ನೇಯ ಸಭೆಯು ಮುಂಬಾಯಿಯಲ್ಲಿರುವ ಸರ್ಕಾರಿ ಕಛೇರಿಯಲ್ಲಿ 1943ನೇ ಮೇ 07 ಮತ್ತು 08 ರಂದು ನಡೆದಿರುತ್ತದೆ. ಕಾರ್ಮಿಕ ಸಚಿವರಾಗಿದ್ದ ಅಂಬೇಡ್ಕರ್ ಅವರು ಅಧ್ಯಕ್ಷತೆಯನ್ನು ವಹಿಸಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವ ವಿಷಯಗಳನ್ನು ಬಗೆಗೆ ಚರ್ಚಿಸಿ ನಿರ್ಣಾಯಗಳನ್ನು ಕೈಗೊಂಡರು ಅವುಗಳೆಂದರೆ; ಕಾರ್ಮಿಕರ ಕಲ್ಯಾಣ, ಕೌಶಲ್ಯ ಮತ್ತು ಅರೆಕೌಶಲ್ಯ ಹೊಂದಿರುವ ಕಾರ್ಮಿಕರಿಗೆ ಉದ್ಯೋಗ, ಕೈಗಾರಿಕಾ ವಿವಾದಗಳು ಮತ್ತು ಕಾರ್ಮಿಕರ ಸಮಸ್ಯೆಗಳ ಬಗೆಗೆ ಗಂಭೀರವಾದ ಚರ್ಚೆ,

ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿರುವಂತೆಯೇ ಜಂಟಿ ಕಾರ್ಮಿಕ ನಿರ್ವಹಣಾ ಸಮಿತಿಗಳನ್ನು ಕಾರ್ಖಾನೆಗಳಲ್ಲಿ ರಚನೆಗೆ ತೀರ್ಮಾನ ತೆಗೆದುಕೊಂಡಿರುವುದು, ಕೈಗಾರಿಕಾ ಘಟಕಗಳನ್ನು ಯುದ್ಧ ಕಾಲದಲ್ಲಿ ಕೆಲಸಕ್ಕೆ ಸೇರಿಸುವ ಪರವಾಗಿ ರಚಿಸಲು ಆದೇಶಿಸಲಾಗಿದೆ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಲು ಉದ್ಯೋಗ ವಿನಿಮಯ ಕೇಂದ್ರಗಳ ಸ್ಥಾಪನೆಗೆ ತೀರ್ಮಾನವನ್ನು ಕೈಗೊಂಡರು. ಹೀಗೆ, ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆದಿರುವ ಈ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯ ಹಾಗೂ ತೀರ್ಮಾನಗಳು ಮುಂದೆ ಕಾರ್ಮಿಕರ ಜೀವನಕ್ಕೆ ಭದ್ರತೆಯನ್ನು ಒದಗಿಸಿಕೊಡುವ ಕಾಯಿದೆಗಳಾಗಿ ಹೊರಬರಲು ಕಾರಣಕರ್ತರೂ ಆಗಿದ್ದಾರೆ.

ಕೇಂದ್ರೀಯ ಶಾಸನಸಭೆಯಲ್ಲಿ ಅಂಬೇಡ್ಕರ್ ಅವರು 1943ನೇ ಜುಲೈ 29 ರಂದು ಗಣಿಗಳಲ್ಲಿ ಕೆಲಸ ನಿರ್ವಹಿಸುವ ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯಗಳ ಕಾಯಿದೆಗೆ ತಿದ್ದುಪಡಿ ತರುವ ವಿಷಯವನ್ನು ಮಂಡಿಸಿದರು. ಆ ಮುಖೇನ ಸದನದಲ್ಲಿ ಸುಧೀರ್ಘವಾಗಿ ಚರ್ಚೆ ಸದಸ್ಯರ ಸರ್ವಸಮ್ಮತವಾದ ಒಪ್ಪಿಗೆಯೊಂದಿಗೆ ಕಾಯಿದೆಯಾಗಿ ಹೊರಬಂದಿರುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಅವರು ಗಣಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಹೆರಿಗೆಯ ಸೌಲಭ್ಯ ಪೂರ್ವ ಕೂಲಿಯನ್ನು ಪಡೆಯುವ ಅನುಕೂಲತೆಯನ್ನು ಕಲ್ಪಿಸಿಕೊಡುವಲ್ಲಿ ಅವಿರತವಾಗಿ ಶ್ರಮಿಸಿರುವುದನ್ನು ಗುರುತಿಸಬಹುದು.

ನವದೆಹಲಿಯಲ್ಲಿ ಎರಡನೇಯ ತ್ರಿಪಕ್ಷೀಯ ಕಾರ್ಮಿಕರ ಸರ್ವಸದಸ್ಯರ ಸಮ್ಮೇಳನದ ಮೊದಲನೇಯ ಅಧಿವೇಶನವು 1943ನೇ ಸೆಪ್ಟೆಂಬರ್ 06 ರಂದು ನಡೆದಿರುತ್ತದೆ. ಈ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದಂಥ ಅಂಬೇಡ್ಕರ್ ಅವರು ಮಜೂರಿ ಮತ್ತು ಸಂಪಾದನೆಯ ವಿಷಯದಲ್ಲಿ ಆಡಳಿತ ಯಂತ್ರಯೊಂದನ್ನು ರಚಿಸಬೇಕು. ಅಲ್ಲದೇ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಕೈಗೊಳ್ಳಬೇಕಾದ ಸಾಮಾಜಿಕ ಭದ್ರತಾ ಕ್ರಮಗಳ ಬಗೆಗೆ ತಳಮಟ್ಟದಲ್ಲಿ ಚರ್ಚಿಸಿದರು. ಹಾಗೆಯೇ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯು ಕಾನೂನಾತ್ಮಕವಾಗಿಯೇ ದೊರಕುವಂತೆ ಕಾಯಿದೆಯನ್ನು ರೂಪಿಸಿ ಅನುಷ್ಠಾನಕ್ಕೆ ತರುವಂತೆ ಪ್ರಬಲವಾಗಿ ಪ್ರತಿಪಾದಿಸಿ ಅಂತಿಮವಾಗಿ ಯಶಸ್ಸನ್ನು ಕಂಡರು. ಅಸ್ಪೃಶ್ಯ ಜನವರ್ಗಕ್ಕೆ ಶೇಕಡ 8.5ರಷ್ಟು ಕೆಲಸ ಕೊಡಿಸಿದೆ ಎಂದರಲ್ಲದೇ ತಾಂತ್ರಿಕ ಶಿಕ್ಷಣದಲ್ಲಿ ಇವರಿಗೆ ಲಂಡನ್‌ನಲ್ಲಿ ಸ್ಥಾನ ಕಾಯ್ದಿರಿಸಲಾಗಿದೆ ಮತ್ತು ಕೇಂದ್ರ ಶಾಸನಸಭೆಯಲ್ಲಿ ಮತ್ತೊಂದು ಸ್ಥಾನವನ್ನು ಹೆಚ್ಚಿಸಿದೆ ಎಂದು ತಿಳಿಸಿದರು. ಆದ್ದರಿಂದಲೇ ಈ ನಿಮ್ನವರ್ಗಗಳಿಗೆ ಪ್ರಾಂತೀಯ ವಿಧಾನ ಪರಿಷತ್ತುಗಳಲ್ಲಿ ಒಂದು ಸ್ಥಾನವು ಮಂಜೂರಾಗಿರುತ್ತದೆ. ಕಾರ್ಮಿಕರಿಗೆ ನೀಡಬೇಕಾಗಿದ್ದಂಥ ಕನಿಷ್ಠ ಕೂಲಿಯನ್ನು ನಿರ್ಧರಿಸುವುದು ಹಾಗೂ ಕಾರ್ಮಿಕರಿಗೆ ಭವಿಷ್ಯದ ನಿಧಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಕ್ರಮವನ್ನು ವಹಿಸಿದರು.

ಅಂಬೇಡ್ಕರ್ ಅವರು ಕಾರ್ಮಿಕ ಸಚಿವರಾಗುವ ಪೂರ್ವದಲ್ಲಿ ಕಾರ್ಮಿಕರ ಸ್ಥಿತಿಯು ಶೋಚನೀಯವಾಗಿತ್ತು. ಅದನ್ನು ಅರಿತಂಥ ಇವರು ಕಾನೂನಿನ ಚೌಕಟ್ಟಿನಲ್ಲಿಯೇ ಶ್ರಮಿಕ

ವರ್ಗದವರಿಗೆ ರಕ್ಷಣೆಯನ್ನು ಒದಗಿಸಿಕೊಟ್ಟಿದ್ದಾರೆ. ಅದರ ಭಾಗವಾಗಿಯೇ ಉದ್ಯಮದಾರರು ಕಾರ್ಮಿಕರು ಸ್ಥಾಪಿಸಿಕೊಳ್ಳುವ ಯಾವುದೇ ತೆರೆನಾದ ಸಂಘ-ಸಂಸ್ಥೆಗಳಿಗೆ ಮಾನ್ಯತೆಯನ್ನೇ ನೀಡುತ್ತಿರಲ್ಲಿಲ್ಲ. ಅಂಥ ಕಾಲಸಂದರ್ಭದಲ್ಲಿ ಅಂಬೇಡ್ಕರ್ ಅವರು ಕೇಂದ್ರೀಯ ಶಾಸನಸಭೆಯಲ್ಲಿ 1943ನೇ ನವೆಂಬರ್ 13 ರಂದು ಭಾರತೀಯ ಕಾರ್ಮಿಕರ ಒಕ್ಕೂಟದ ಕಾಯಿದೆ ತಿದ್ದುಪಡಿಯನ್ನು ಮಂಡಿಸಿ ಒಪ್ಪಿಗೆಯನ್ನು ಸರ್ವಾನುಮತದಿಂದಲೇ ಪಡೆದರು. ಈ ಮುಖೇನವಾಗಿಯೇ ಅಂಬೇಡ್ಕರ್ ಅವರು ಉದ್ಯಮದಾರರಿಂದ ಕಾರ್ಮಿಕರ ಸಂಘಗಳಿಗೆ ಮಾನ್ಯತೆಯು ಸಿಗುವಂತೆ ಮಾಡಿದರು.

ಕಾರ್ಮಿಕರ ಸ್ಥಾಯಿ ಸಮಿತಿಯ 4ನೇಯ ಅಧಿವೇಶನವು ಲಕ್ನೋದಲ್ಲಿ 1944ನೇ ಜನವರಿ 25 ಮತ್ತು 26 ರಂದು ನಡೆದಿರುತ್ತದೆ ಈ ಅಧಿವೇಶನದ ಅಧ್ಯಕ್ಷತೆಯನ್ನು ಅಂಬೇಡ್ಕರ್ ಅವರು ವಹಿಸಿದರು. ಹಾಗೆಯೇ ಕಾರ್ಖಾನೆಗಳ ಮಾಲೀಕರು ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಕೆಲವು ನಿರ್ಣಾಯಗಳನ್ನು ಕೈಗೊಂಡಿದ್ದರು. ಆ ನಿರ್ಣಾಯಗಳೆಂದರೆ; ಕೈಗಾರಿಕೆಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ತುಟ್ಟಿಭತ್ಯೆಯನ್ನು ನೀಡುವುದು. ಕಾರ್ಮಿಕರ ಗೈರು ಹಾಜರಿ. ಕಾರ್ಮಿಕರ ಸೇವಾ ದಾಖಲೆಗಳ ಸಂರಕ್ಷಣೆ. ಕಾರ್ಮಿಕರಿಗೆ ಕಾರ್ಖಾನೆಯಲ್ಲಿ ರಿಯಾಯಿತಿ ದರದಲ್ಲಿ ಉಪಹಾರ ಗೃಹದ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ವಿಷಯಗಳಿಗೆ ಸಂಬಂಧಿಸಿದಂತೆ ಗಂಭೀರವಾದ ಚರ್ಚೆ. ಕಾರ್ಮಿಕರ ಸಮಗ್ರ ಕಲ್ಯಾಣಕ್ಕೆ ಅಗತ್ಯವಾಗಿ ಸಕಾರಾತ್ಮಕ ನಿರ್ಣಯಗಳನ್ನು ಕೈಗೊಳ್ಳುವಂತೆ ಅಧಿವೇಶನದಲ್ಲಿ ನಿರ್ಣಾಯಗಳನ್ನು ತೆಗೆದುಕೊಂಡು ಕಾರ್ಮಿಕರಿಗೆ ರಕ್ಷಣೆಯನ್ನು ದೊರಕುವಂತೆ ಮಾಡಿದರು.

ಕಾರ್ಮಿಕರ ರಕ್ಷಣೆಯನ್ನು ಕಾನೂನು ಮತ್ತು ಕಾಯಿದೆಗಳ ಮೂಲಕವೇ ಒದಗಿಸಿಕೊಡಲು ಶ್ರಮಿಸುತ್ತಿರುವ ಅಂಬೇಡ್ಕರ್ ಅವರು 1944ನೇ ಮಾರ್ಚ್ 30 ರಂದು ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಭಾಗವಹಿಸಿದರು. ಈ ಸಭೆಯಲ್ಲಿ ಕಾರ್ಮಿಕರ ಭದ್ರತೆಗೆ ಸಂಬಂಧಿಸಿದಂತೆ ಹಲವು – ಹತ್ತು ವಿಷಯಗಳ ಮೇಲೆ ಬಹುಗಂಭೀರ ಚರ್ಚೆಗಳು ನಡೆದು ನಿರ್ಣಾಯಗಳಾಗಿರುತ್ತವೆ. ಅವುಗಳೆಂದರೆ; ಭಾರತೀಯ ನಾಗರಿಕ ಸೇವೆಗಳು ಮತ್ತು ಭಾರತೀಯ ಪೋಲಿಸ್ ಸೇವೆಗಳ ನೇಮಕಾತಿಯಲ್ಲಿ ಭಾರತೀಯರನ್ನು ಅಖಿಲ ಭಾರತೀಯ ಸೇವೆಗಳ ಮೂಲಕ ನೇಮಕ ಮಾಡಿಕೊಳ್ಳಲು ಸಮ್ಮತಿಯನ್ನು ನೀಡಿರುವುದು. ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ಕಾಯಿದೆ- 1944ಕ್ಕೆ ಒಪ್ಪಿಗೆ ಗಣಿ ಕಾರ್ಮಿಕರಿಗೆ ನಿಧಿಯನ್ನು ಸ್ಥಾಪಿಸುವುದು. ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂಥ ಚಟುವಟಿಕೆಗಳಿಗೆ ಹಣವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುವುದು. ವರ್ಷಪೂರ್ತಿ ನಡೆಯುವ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಸಂಬಳ ಸಹಿತ ರಜಾಕೊಡುವ ದಿನಗಳು ದೊರೆಯುವಂತೆ 1944ನೇ ಏಪ್ರಿಲ್ ತಿಂಗಳಲ್ಲಿ ಮಸೂದೆಗೆ ತಿದ್ದುಪಡಿಯನ್ನು ತರಬೇಕೆಂದು ತಿಳಿಸಿದರು. ಕಡ್ಡಾಯ ರಾಜಿ ಮಾಡಿಕೊಳ್ಳುವುದಕ್ಕೆ ಅಥವಾ ಪಂಚಾಯಿತಿ ತೀರ್ಮಾನಕ್ಕೆ ಅಂಬೇಡ್ಕರ್ ಅವರು ನ್ಯಾಯಸಮ್ಮತವಾಗಿ ಒಪ್ಪಿಸಿದರು. ಈ ತತ್ವವು

ಶಾಶ್ವತವಾಗಿ ಕಾರ್ಮಿಕ ನಿಬಂಧನೆ ನಲ್ಲಿ ಉಳಿಯುವ ಪ್ರಶ್ನೆಯಾಗಿ ಪ್ರಖರವಾಗಿ ಪ್ರತಿಪಾದಿಸಿದರು. ದೆಹಲಿಯಲ್ಲಿ 1944ನೇ ಜೂನ್ 27 ರಂದು ನಡೆದಿರುವ ಕಾರ್ಮಿಕರ ಸ್ಥಾಯಿ ಸಮಿತಿ ಸಭೆಯ 5ನೇಯ ಅಧಿವೇಶನದಲ್ಲಿ ಅಂಬೇಡ್ಕರ್ ಅವರು ಭಾಗವಹಿಸಿದರು. ಹಾಗೆಯೇ ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ 1943ರ ಪ್ರಕಾರ ಮಾಲೀಕರು ಮತ್ತು ಕಾರ್ಮಿಕರ ಸಂಘಗಳಿಗೆ ಮಾನ್ಯತೆಯನ್ನು ದೊರಕಿಸಿಕೊಟ್ಟರು. ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳು ಸೂಚಿಸಿ ಹಾಗೂ ಸಿಫಾರಸ್ಸುಗಳನ್ನು ಮಾಡಿದರು.

1944ನೇ ಆಗಸ್ಟ್ 20 ರಂದು ಅಂಬೇಡ್ಕರ್ ಅವರು ಕೇಂದ್ರೀಯ ಶಾಸನಸಭೆಯಲ್ಲಿ ಭಾಗವಹಿಸಿದರು. ಆ ಮುಖೇನ ಸದಸದ ಒಳಗೆ ಲಿಂಗ-ತಾರತಮ್ಯವಿಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಎಂಬ ವಿಷಯವನ್ನು ಕುರಿತಂತೆ ಚರ್ಚಿಸಿ, ಅದು ಕಾನೂನಾಗಿ ಜಾರಿಗೆ ಬರಲು ಕಾರಣೀಭೂತರಾಗಿದ್ದಾರೆ. ಅಂದರೆ, ಈವರೆಗೆ ವೇತನದಲ್ಲಿ ತಾರತಮ್ಯತೆಯು ತಾಂಡವವಾಡುತ್ತಿತ್ತು. ಅದನ್ನು ಮನಗಂಡ ಅಂಬೇಡ್ಕರ್ ಅವರು ಪುರುಷ- ಮಹಿಳೆಯರಿಬ್ಬರೂ ಸರಿಸಮಾನರು. ಹಾಗಾಗಿಯೇ ಅವರಿಬ್ಬರು ಮಾಡುವಂಥ ಕೆಲಸಗಳಿಗೆ ಸಮಾನವಾದ ವೇತನವನ್ನು ದೊರಕಿಸಿಕೊಡುವುದೇ ಅಂಬೇಡ್ಕರ್ ಅವರ ಧ್ಯೇಯವೇ ಆಗಿತ್ತು. ಇದು ಕೂಡ ಕಾರ್ಮಿಕರ ಪರವಾದ ನಿಲುವಿನ ಪ್ರತಿಪಾದನೆಯಾಗಿರುತ್ತದೆ.

ಅಂಬೇಡ್ಕರ್ ಅವರು ಕಾರ್ಮಿಕ ಸಚಿವರಾಗಿ 1944ನೇ ಆಗಸ್ಟ್ 24 ರಂದು ಕಲ್ಕತ್ತಾದಲ್ಲಿ ನಡೆದಿರುವ ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ತಾಂತ್ರಿಕ ತರಬೇತಿ ಯೋಜನೆಯ ಸಲಹಾ ಸಮಿತಿಯ ರಚನೆಯ ಬಗೆಗೆ ಹಲವು ಬಹುಗಂಭೀರವಾಗಿಯೇ ಚರ್ಚಿಸಿದರು. ಅವುಗಳೆಂದರೆ; ತಾಂತ್ರಿಕ ಮತ್ತು ವೈಜ್ಞಾನಿಕ ತರಬೇತಿ ಇಲ್ಲದೇ ದೇಶದ ಪ್ರಗತಿ ಸಾಧ್ಯವಿಲ್ಲ. ತಾಂತ್ರಿಕ ಮತ್ತು ವೈಜ್ಞಾನಿಕ ತರಬೇತಿ ಹೊಂದಿರುವ ದೇಶಗಳು ಪ್ರಗತಿಯನ್ನು ಸಾಧಿಸಿರುತ್ತವೆ. ಜನರ ಜೀವನ ಮಟ್ಟವನ್ನು ಕಾಪಾಡಲು ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಅಗತ್ಯವಾಗಿದೆ. ಭಾರತದ ಶಿಕ್ಷಣ ಪದ್ಧತಿಯ ಭಾಗವಾಗಬೇಕು.

1944ನೇ ಅಕ್ಟೋಬರ್ 27 ರಂದು ದೆಹಲಿಯಲ್ಲಿ ಕಾರ್ಮಿಕರ ಸರ್ವಸದಸ್ಯರ ಸಮ್ಮೇಳನದ ಆರನೇಯ ಅಧೀವೇಶನವು ನಡೆದಿರುತ್ತದೆ. ಈ ಅಧೀವೇಶನದಲ್ಲಿ ಭಾಗವಹಿಸಿದ್ದ ಅಂಬೇಡ್ಕರ್ ಅವರು ಕಾರ್ಮಿಕರ ಕಲ್ಯಾಣಕ್ಕೆ ಹಲವು-ಹತ್ತು ಸಲಹೆಗಳನ್ನು ನೀಡಿದರು. ಅವುಗಳೆಂದರೆ; ಸರ್ಕಾರವು ಕಾರ್ಮಿಕರ ಕಲ್ಯಾಣ ಸಮಿತಿ ಎಂಬ ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನವನ್ನು ತೆಗೆದುಕೊಂಡರು. 1934ರ ಕಾರ್ಖಾನೆಯ ಕಾಯಿದೆಗೆ ತಿದ್ದುಪಡಿಯನ್ನು ತರಲು ಸೂಚಿಸಲಾಗಿರುತ್ತದೆ. ರಜಾ ದಿನಗಳಲ್ಲಿಯೂ ಕಾರ್ಖಾನೆಯ ಕಾರ್ಮಿಕರಿಗೆ ವೇತನವು ದೊರಕುವಂತೆ ಮಾಡಿರುವುದು. 1941ರ

ಗಣಿಗಳ ಹೆರಿಗೆ ಲಾಭ ಕಾಯಿದೆಗೆ ತಿದ್ದುಪಡಿಯನ್ನು ತಂದು, ಗಣಿಯ ಒಳಗಡೆ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದು.

1945ನೇ ಮಾರ್ಚ್ 17 ರಂದು ನವದೆಹಲಿಯಲ್ಲಿ ನಡೆದಿರುವ ಆರನೇಯ ಕಾರ್ಮಿಕರ ಸ್ಥಾಯಿ ಸಮಿತಿಯ ಸಭೆಯು ನಡೆದಿರುತ್ತದೆ. ಈ ಸಭೆಯಲ್ಲಿ ಭಾಗವಹಿಸಿದ ಅಂಬೇಡ್ಕರ್ ಅವರು ಕಾರ್ಮಿಕರಿಗೆ ಕಾನೂನಿನ ರಿತ್ಯ ಧಕ್ಕಬೇಕಾಗಿರುವ ಸವಲತ್ತುಗಳ ಬಗೆಗೆ ಪ್ರಸ್ತಾಪಿಸಿದರು. ಅವುಗಳೆಂದರೆ; ಕೈಗಾರಿಕಾ ಕಾರ್ಮಿಕರಿಗೆ ಆರೋಗ್ಯ ವಿಮೆ. ಪ್ರೊ.ಅಡಕರ್ ಅವರು ಭಾರತದಲ್ಲಿ ಕೈಗಾರಿಕಾ ಕಾರ್ಮಿಕರ ಆರೋಗ್ಯ ವಿಮೆಯ ಬಗೆಗೆ ನೀಡಿರುವ ವರದಿಯ ಬಗೆಗೆ ಚರ್ಚೆ. ಕಾರ್ಮಿಕರಿಗೆ ವೈದ್ಯಕೀಯ ಉಪಚಾರದ ಖರ್ಚಾನ್ನು ಆರೋಗ್ಯ ವಿಮೆಯಿಂದಲೇ ಬರಿಸುವುದು. ಕಾರ್ಮಿಕರಿಗೆ ಸಲ್ಲುವ ಹೆರಿಗೆ ಲಾಭಗಳು ಮತ್ತು ಕಾರ್ಮಿಕರ ಪರಿಹಾರ ಪಡೆದುಕೊಳ್ಳುವುದು. ಭಾರತದ ಕೈಗಾರಿಕಾ ಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸಿಕೊಡುವುದು.

1945ನೇ ನವೆಂಬರ್ 27 ರಂದು ದೆಹಲಿಯಲ್ಲಿ 7ನೇಯ ಭಾರತೀಯ ಕಾರ್ಮಿಕರ ಸಮ್ಮೇಳನವು ನಡೆದಿರುತ್ತದೆ. ಅಂಬೇಡ್ಕರ್ ಅವರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ, ಬಂಡವಾಳಗಾರರು ಕಾರ್ಮಿಕರ ಅಭಿವೃದ್ಧಿಗಾಗಿ ಏಕೆ ಹಣವನ್ನು ಖರ್ಚುಮಾಡುತ್ತಿಲ್ಲ ಎಂದು ಕೇಳಬೇಕೆಂದು ಕಾರ್ಮಿಕರಿಗೆ ತಿಳಿಸಿಕೊಟ್ಟರು. ಹಾಗೆಯೇ 1945ನೇ ಡಿಸೆಂಬರ್ 05 ರಂದು ಅಂಬೇಡ್ಕರ್ ಅವರು ಕಾರ್ಯಕಾರಿ ಮಂಡಳಿಯ ಸಭೆಯನ್ನು ಉದ್ಘಾಟಿಸಿದರು. ಈ ಸಭೆಯಲ್ಲಿ ಹಲವು ವಿಷಯಗಳನ್ನು ಚರ್ಚಿಸಿ, ಕಾರ್ಮಿಕರಿಗೆ ಆಗುತ್ತಿದ್ದಂಥ ಅಸಮಾನತೆ ಮತ್ತು ಅನ್ಯಾಯವನ್ನು ತಡೆಯಲು ಹಾಗೂ ಕೈಗಾರಿಕಾ ಶಾಂತಿಯನ್ನು ಉಂಟುಮಾಡಲು ಕೆಲವು ಪರಿಹಾರ ಮಾರ್ಗಗಳನ್ನು ಸೂಚಿಸಿದರು. ಆ ಮಾರ್ಗಗಳೆಂದರೆ; ರಾಜಿ ಮಾಡುವ ನ್ಯಾಯಸ್ಥಾನಗಳ ರಚನೆ. ಔದ್ಯೋಗಿಕ ವಿವಾದ ಶಾಸನದ ತಿದ್ದುಪಡಿ. ಕಾರ್ಯಕಾರಿ ಮಂಡಳಿಯಲ್ಲಿ ಕನಿಷ್ಠ ಕೂಲಿ ಕಾಯಿದೆಯನ್ನು ಜಾರಿಗೆ ತರಲು ಒತ್ತಾಯ ಮಾಡಿರುವುದು. ಕಾರ್ಮಿಕರ ಪರಿಹಾರ ಕಾಯಿದೆ. ಕಾರ್ಮಿಕರ ಒಕ್ಕೂಟ ಕಾಯಿದೆ. ಕೈಗಾರಿಕಾ ಕಾರ್ಮಿಕರ ವಿಮೆ ಮತ್ತು ಸಾಮಾಜಿಕ ಭದ್ರತೆಯ ಯೋಜನೆಗಳಿಗೆ ಒಪ್ಪಿಗೆ. ಮೈಖಾ ಗಣಿ ಕಾರ್ಮಿಕರ ಕಲ್ಯಾಣ ನಿಧಿ ಕಾಯಿದೆಯನ್ನು ಶಾಸನಸಭೆಯಲ್ಲಿ ಮಂಡನೆ ಮಾಡಿರುವುದು. ಗಣಿ ಕಾರ್ಮಿಕರಿಗೆ ಕಲ್ಯಾಣ ಚಟುವಟಿಕೆಗಳಿಗೆ ಬೇಕಾದ ನಿಧಿಯ ಸ್ಥಾಪನೆಗೆ ಒತ್ತನ್ನು ನೀಡಿರುವುದು. ಹೊಸ ಕಾರ್ಮಿಕ ಕಾಯಿದೆಗಳನ್ನು ರೂಪಿಸುವುದು. ಕಾರ್ಮಿಕ ಕಲ್ಯಾಣಗಳಿಗೆ ಹೆಚ್ಚಿನ ಒತ್ತು ನೀಡಿರುವುದು.

ಕೈಗಾರಿಕಾ ಶಾಂತಿಪಾಲನೆ ಕಾನೂನಿನಿಂದ ಸ್ಥಾಪಿಸುವುದು. ಆದರೆ ಅಧಿಕಾರ ಚಲಾವಣೆಯಿಂದ ಮಾತ್ರ ಸಾಧ್ಯವಿಲ್ಲ. ಅದು ಸಾಮಾಜಿಕ ನ್ಯಾಯದ ತಳಹದಿಯಿಂದ ಕಾರ್ಮಿಕರಿಗೆ ಶಾಂತಿ ಲಭಿಸಬಹುದು. ಒಂದು ತ್ರಿಕೋನ ಪ್ರಸ್ತಾಪ ಅದಕ್ಕೆ ಸರಿಯಾಗಬಹುದು. ಶೋಷಣೆಯ

ನಿರ್ಮೂಲನೆಯಿಂದ, ಕಾರ್ಮಿಕ ಕಲ್ಯಾಣದಿಂದ ಮತ್ತು ಸರಿಯಾದ ಕಾರ್ಮಿಕ ಬಾಂದವ್ಯ ಸ್ಥಾಪನೆಯಿಂದ ಕಾರ್ಮಿಕ ಶಾಂತಿ ಖಂಡಿತಾ ಲಭಿಸುತ್ತದೆ ಎಂದಿದ್ದಾರೆ. ಇದು ಅಂಬೇಡ್ಕರ್ ಅವರ ಕಾರ್ಮಿಕರ ಬಗೆಗೆ ಶಾಂತಿಪಾಲನೆ ಮುಖ್ಯವಾದ ವಿಷಯವೇ ಆಗಿರುತ್ತದೆ.

**ಅಂಬೇಡ್ಕರ್ ಅವರು ಕಾರ್ಮಿಕ ಮಂತ್ರಿಯಾಗಿ ತೆಗೆದುಕೊಂಡಿರುವ ಕ್ರಮಗಳು ಮತ್ತು ಮಾಡಿರುವ ಸಾಧನೆ;**

ಕಾರ್ಮಿಕರ ಹಕ್ಕುಗಳ ಅನುಷ್ಠಾನ, ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಕ್ರಮಗಳು, ಕಾರ್ಮಿಕರ ಸಂರಕ್ಷಣೆಗಾಗಿ ಹಲವು ಶಾಸನಗಳ ರಚನೆ, ಕಾರ್ಮಿಕರು ದುಡಿಯುತ್ತಿದ್ದ 12 ಗಂಟೆಗಳನ್ನು 08 ಗಂಟೆಗೆ ಇಳಿಕೆ ಮಾಡಿಸಿರುವುದು, ಮಹಿಳೆಯರಿಗೆ ಹೆರಿಗೆಗೆ ಸಂಬಳ ಸಹಿತ ರಜಾ ದಿನಗಳ ನೀಡಿಕೆ, ಮಹಿಳಾ ಕಾರ್ಮಿಕರಿಗೆ ಪ್ರತ್ಯೇಕವಾಗಿ ಕಲ್ಯಾಣ ನಿಧಿಯ ಸ್ಥಾಪನೆ, ಮಹಿಳಾ ಮತ್ತು ಪುರುಷ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನದ ಜಾರಿ, ಕಾರ್ಮಿಕರಿಗೆ ತುಟ್ಟಿ ಭತ್ಯ ಜಾರಿ, ಕಾರ್ಮಿಕರಿಗೆ ರಜಾ ಸೌಲಭ್ಯಗಳು, ಕಾರ್ಮಿಕರಿಗೆ ಕಾಲಾಕಾಲಕ್ಕೆ ವೇತನ ಪರಿಷ್ಕರಣೆ, ಭವಿಷ್ಯ ನಿಧಿ ಸ್ಥಾಪನೆ, ಕಾರ್ಮಿಕರಿಗೆ ತರಬೇತಿಯನ್ನು ನೀಡುವುದು, ನಿವೃತ್ತಿ ವೇತನದ ಸೌಲಭ್ಯಗಳು, ಪ್ರತ್ಯೇಕವಾಗಿ ಕಾರ್ಮಿಕ ಕಲ್ಯಾಣ ಇಲಾಖೆಯ ಸ್ಥಾಪನೆ, ಕಾರ್ಮಿಕರಿಗಾಗಿಯೇ ಮುಖ್ಯ ಕಾರ್ಮಿಕ ಆಯುಕ್ತರ ನೇಮಕ, ಕಾರ್ಮಿಕರ ಆಯೋಗದ ರಚನೆ, ಪ್ರತ್ಯೇಕ ಕಾರ್ಮಿಕ ಸಚಿವಾಲಯದ ರಚನೆ, ಆರೋಗ್ಯ ವಿಮೆಯ ಜಾರಿ, ಉದ್ಯೋಗ ವಿನಿಮಯ ಕೇಂದ್ರಗಳ ಸ್ಥಾಪನೆ, ಏಷ್ಯಾದಲ್ಲಿಯೇ ಪ್ರಥಮ ಬಾರಿಗೆ ರಾಜ್ಯ ಉದ್ಯೋಗಿಗಳಿಗೆ ವಿಮೆ (ಇಎಸ್‌ಐ) ಜಾರಿ.

ಅಂಬೇಡ್ಕರ್ ಅವರು ಕಾರ್ಮಿಕ ನಾಯಕರಾಗಿ ಕಾರ್ಮಿಕರಿಗೆ ಸಂರಕ್ಷಕ ಕಾಯಿದೆ ಮತ್ತು ಕಾನೂನುಗಳನ್ನು ಅನುಷ್ಠಾನಗೊಳಿಸುವಲ್ಲಿ ತುಡಿದವರು. ಇಷ್ಟೆಲ್ಲ ಕಾಯಿದೆ ಮತ್ತು ಕಾನೂನುಗಳನ್ನು ಬ್ರಿಟಿಷ್ ಪ್ರಭುತ್ವವು ತನ್ನ ಎರಡು ಶತಮಾನಗಳ ಆಡಳಿತಕ್ಕೆ ಸಾಫಲ್ಯತೆಯನ್ನು ಕಂಡಿರುವ ಸಲುವಾಗಿಯೇ ಎಲ್ಲಾ ಪ್ರತಿನಿಧಿಗಳು ಮತ್ತು ಪಕ್ಷಗಳನ್ನು ಒಳಗೊಂಡ ಹೊಸ ಮಾದರಿಯ ಸರ್ಕಾರವನ್ನು ರಚಿಸುವುದಾಗಿ ವೈಸ್‌ರಾಯ್ ಅವರು ಘೋಷಿಸಿದರು. ಆ ಕಾರಣವಾಗಿಯೇ ಕಾರ್ಮಿಕರ ದಮನಿತ ಧ್ವನಿಗೆ ಗಟ್ಟಿಧ್ವನಿಯಾಗಿ ರಕ್ಷರಾಗಿದ್ದ ಡಾ.ಅಂಬೇಡ್ಕರ್ ಅವರು ಸಂಸದೀಯ ಹಾಗೂ ಸಂವಿಧಾನಾತ್ಮಕ ನೈನಿಕತೆಗೆ ಬದ್ಧವಾಗಿ ತಾವು ನಿರ್ವಹಿಸುತ್ತಿದ್ದಂಥ ವೈಸ್‌ರಾಯ್ ಕಾರ್ಯಕಾರಿ ಮಂಡಳಿಯ ಸಚಿವ ಸ್ಥಾನದ ಸದಸ್ಯತ್ವಕ್ಕೆ 1946ನೇ ಮೇ ತಿಂಗಳ ಕೊನೆಯ ವಾರದಲ್ಲಿ ರಾಜಿನಾಮೆಯನ್ನು ನೀಡಿರುವುದು ವಿಶೇಷತೆಯಿಂದಲೇ ಕೂಡಿರುತ್ತದೆ. ಏಕೆಂದರೆ, ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವ ಭರವಸೆಯನ್ನು ನೀಡಿ, ಸಂವಿಧಾನ ರಚನೆಯ ಪ್ರಕ್ರಿಯೆಯು ಪ್ರಜಾಸತ್ತಾತ್ಮಕವಾಗಿ ನಡೆಸಲು ಆರಂಭಗೊಂಡಿತ್ತು. ಅಂಬೇಡ್ಕರ್ ಅವರು ನವಭಾರತ ಸಂವಿಧಾನ ರಚನಾ ಸಭೆಗೆ ಪ್ರವೇಶವನ್ನು ಪಡೆದುಕೊಳ್ಳುವ ಕಾರ್ಯದಲ್ಲಿ ತೊಡಗಿದ್ದರು.

**ಭಾರತದಲ್ಲಿ ಜಾರಿಯಲ್ಲಿರುವ ಕಾರ್ಮಿಕ ಕಾನೂನುಗಳು;**

ಕೆಲಸಗಾರರ ಪರಿಹಾರ ಕಾಯಿದೆ–1923, ಟ್ರೇಡ್ ಯುನಿಯನ್ ಕಾಯಿದೆ– 1926, ಕೂಲಿ ಸಂದಾಯ ಕಾಯಿದೆ–1936, ಕಾರ್ಖಾನೆ ಕಾಯಿದೆ– 1944, ಕಾರ್ಖಾನೆಗಳ ಉದ್ಯೋಗಿಗಳ ಕಾಯಿದೆ– 1946, ಕಾರ್ಖಾನೆಗಳ ವಿವಾದ ಕಾಯಿದೆ–1947, ಉದ್ಯೋಗಿಗಳ ರಾಜ್ಯ ವಿಮೆ ಕಾಯಿದೆ–1948, ಕನಿಷ್ಠ ವೇತನ ಕಾಯಿದೆ–1948, ಉದ್ಯೋಗಿಗಳ ಪಿಎಫ್ ಮತ್ತು ಎಂಪಿ ಕಾಯಿದೆ–1952, ಹೆರಿಗೆ ಸೌಲಭ್ಯ ಕಾಯಿದೆ– 1961, ಕಾರ್ಮಿಕರ ನೇಮಕಾತಿ ಕಾಯಿದೆ–1961, ವೇತನ ಸಂದಾಯ ಕಾಯಿದೆ–1965, ಗ್ರ್ಯಾಜಿಯುಟಿ ಸಂದಾಯ ಕಾಯಿದೆ–1972, ಗುತ್ತಿಗೆ ಕಾರ್ಮಿಕರ (ರೆಗ್ಯುಲೇಷನ್ ಮತ್ತು ನಿರ್ವಹಣೆ), ಭಾರತದಲ್ಲಿ ಸಾಮಾಜಿಕ ಭದ್ರತೆಯ ಕಾನೂನು. ಈ ಮೇಲಿನ ಕಾರ್ಮಿಕರ ಕಾನೂನು ಮತ್ತು ಕಾಯಿದೆಗಳು ಭಾರತದಲ್ಲಿ ಜಾರಿಗೆ ಬಂದಿರುವ ಹಿಂದೆ ಮತ್ತು ಕಾರ್ಮಿಕರ ಸಂರಕ್ಷಣೆಯಲ್ಲಿ ಅಂಬೇಡ್ಕರ್ ಅವರ ಶ್ರಮ ಮತ್ತು ಪಾತ್ರವು ಅವಿಸ್ಮರಣೀಯವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು**


1. Dr.Babasaheb Ambedkar Writings And Speeches (2014) Vol-02
2. Dr.Babasaheb Ambedkar Writings And Speeches (2014) Vol-10
3. Baisantry D.K (1990) Dr.Ambedkar Pioneer Of Labour Welfare
4. Dhanjaya Keer (2005) Dr.Ambedkar Life And Mission
5. Dr.S.S.Narwade (1997) Dr.Ambedkar And Indian Independent Labour Party
6. Kuber.W.N (1978) B.R.Ambedkar : Builders Of Modern India
7. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (2015),ಸಂಪುಟ–2&8
8. ಡಾ.ವಿ.ಷಣ್ಮುಗಂ (2016) ಆಧುನಿಕ ಭಾರತದ ನಿರ್ಮಾಪಕ ಡಾ.ಬಿ.ಆರ್.ಅಂಬೇಡ್ಕರ್
9. ಡಾ.ಮ.ನ.ಜವರಯ್ಯ (1995) ಅಂಬೇಡ್ಕರ್ ವಿದ್ಯಾರ್ಥಿ ಜೀವನ ಚರಿತ್ರೆ
10. ಡಾ.ಜಿ.ಗೋಪಾಲ್ (2017)(ಅನು)ಡಬ್ಲ್ಯೂ.ಎನ್.ಕುಬೇರ್ (ಮೂಲ) ನವಭಾರತ ನಿರ್ಮಾಪಕರು ಡಾ.ಬಿ.ಆರ್.ಅಂಬೇಡ್ಕರ್